**ದಿನಾಂಕಃ 15.10.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಪಾಟೀ ಸವಾಲು: 2 ನೇ ಎದುರುದಾರರ ಪರ ವಕೀಲರಾದ ಶ್ರೀ.GSS ರವರಿಂದಃ**

1) **2024** ನೇ ಇಸವಿ ಜೂನ್ ತಿಂಗಳು **27** ಮತ್ತು **28** ನೇ ತಾರೀಖಿನ ಮದ್ಯದಲ್ಲಿ ಬರುವಂತಹ ಮಧ್ಯರಾತ್ರಿ **12** ಗಂಟೆ ಸಮಯದಲ್ಲಿ ಅಪಘಾತವು ಆಗಿದೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಬದಲಾಗಿ ನಾನು ಸಲ್ಲಿಸಿರುವಂತಹ ಸಾಕ್ಷಿ ಪ್ರಮಾಣ ಪತ್ರವನ್ನು ನಾನು ಓದಿಕೊಂಡಿದ್ದೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರದ ಖಂಡಿಕೆ **2** ರಲ್ಲಿ ದಿಃ**27.06.2024** ರಂದು ಮಧ್ಯಾಹ್ನ **2.30** ರ ಸಮಯದಲ್ಲಿ ಅಪಘಾತವು ಆಗಿದೆ ಎಂದು ಬರೆಸಿದ್ದೇನೆ ಎಂದರೆ ಸರಿ.

2) ನಾನು ಹೇಳಿದ ಹಾಗೆ ಮತ್ತು ಹೇಳಿದ ರೀತಿಯಲ್ಲಿ ಯಾವುದೇ ಅಪಘಾತವು ಆಗಿರುವುದಿಲ್ಲ ಎಂದರೆ ಸುಳ್ಳು. ಕಾರಿನಲ್ಲಿ ನಾನು ಮುಂದುಗಡೆ ಆಸನದಲ್ಲಿ ಕುಳಿತ್ತಿದ್ದೆನು. ಆ ರೀತಿ ನಾನು ಕಾರಿನಲ್ಲಿ ಹೋಗುವಾಗ ಕಾರನ್ನು ನಿಧಾನವಾಗಿ ಚಾಲನೆ ಮಾಡು ಎಂದು ನಾನು ಕಾರಿನ ಚಾಲಕನಿಗೆ ಹೇಳಿದ್ದೇನೋ ಹೇಗೆ ಎಂದರೆ ಆ ಕಾರಿಗೆ ಒಂದು **Speed locker** ಅಳವಡಿಸಲಾಗಿದೆ ಮತ್ತು ಆ ಕಾರಣದಿಂದ ಆ ಕಾರಿನಲ್ಲಿ ಒಂದು ಗಂಟೆಗೆ **80** ಕಿ.ಮೀ. ಗಿಂತ ಹೆಚ್ಚಿನ ವೇಗದಲ್ಲಿ ಹೋಗಲು ಸಾಧ್ಯವಿಲ್ಲ.

3) ಅತಿವೇಗ ಮತ್ತು ನಿರ್ಲಕ್ಷ್ಯ ತನದಿಂದ **ಅಪಘಾತವು ಆಗಿರುವುದಿಲ್ಲ** ಎಂದರೆ ಕಾರು ವೇಗವಾಗಿ ಹೋಗಿರುವುದಿಲ್ಲ. ಅಪಘಾತವು ಕಾರಿನ ಚಾಲಕನ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಸುಳ್ಳು.

4) ನಾನು ಈ ದಿನ ಬೆಳಿಗ್ಗೆ **11** ಗಂಟೆ ವೇಳೆಗೆ ನ್ಯಾಯಾಲಯಕ್ಕೆ ಬಂದಿದ್ದೇನೆ. ನ್ಯಾಯಾಲಯಕ್ಕೆ ಬಂದಾಗಿನಿಂದ ಈ ವರೆಗೆ ನನಗೆ ಯಾವುದೇ ತೊಂದರೆಯು ಆಗಿರುವುದಿಲ್ಲ.

**ಸೂಚನೆ:** ಈ ಸಾಕ್ಷಿದಾರರು ಈ ಉತ್ತರವನ್ನು ಹೇಳುವ ಸಮಯದಲ್ಲಿ ಮಧ್ಯಾಹ್ನ **1.30** ರ ಸಮಯ ಆಗಿದೆ.

5) ಅಪಘಾತದ ಕಾರಣದಿಂದ ನನಗೆ ಆಗಿದ್ದ ಗಾಯಗಳಿಗೆ ಚಿಕಿತ್ಸೆ ಪಡೆಯಲು ನಾನು **5** ಲಕ್ಷ ರೂಪಾಯಿ ಖರ್ಚು ಮಾಡಿದ್ದೇನೆ ಎಂಬುದಾಗಿ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು. ಈ ಅಪಘಾತ ಆಗುವುದಕ್ಕಿಂತ ಮೊದಲಿನಿಂದಲೂ ನನಗೆ ಹಲವಾರು ಆರೋಗ್ಯದ ಸಮಸ್ಯೆಗಳು ಇದ್ದವು ಎಂದರೆ ಸುಳ್ಳು. ನಾನು ಹಾಜರುಪಡಿಸಿರುವ ಮೆಡಿಕಲ್ ದಾಖಲೆಗಳನ್ನು ಈ ಪ್ರಕರಣಕ್ಕಾಗಿ ನಾನು ಸೃಷ್ಟಿ ಮಾಡಿದ್ದೇನೆ ಎಂದರೆ ಸುಳ್ಳು.

6) ನಾನು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ ಎನ್ನುವ ಸಂಬಂಧ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ.

7) ನಿ.ಪಿ.**9** ಎಂದು ಗುರುತು ಆಗಿರುವ ದಾಖಲೆಯಲ್ಲಿ ನಾನು ಅಪಘಾತದಲ್ಲಿ ಗಾಯಗೊಂಡಿದ್ದೇನೆ ಎಂಬುದಾಗಿ ಯಾವುದೇ ಉಲ್ಲೇಖ ಇರುವುದಿಲ್ಲ ಮತ್ತು ಆ ದಾಖಲೆಯನ್ನು ನನ್ನ ಅನುಕೂಲಕ್ಕಾಗಿ ನಾನು ಸೃಷ್ಟಿ ಮಾಡಿದ್ದೇನೆ ಎಂದರೆ ಸುಳ್ಳು.

8) ದಿಃ**01.08.2025** ರಂದು ನಾನು ಹಾಜರುಪಡಿಸಿರುವ ಲೆಕ್ಕಚಾರದ ಪಟ್ಟಿಯಲ್ಲಿ **(memo of calculation)** ನಲ್ಲಿ **7,41,774** ರೂಪಾಯಿ ನನಗೆ ಖರ್ಚಾಗಿದೆ ಎಂದು ಇದೆ ಮತ್ತು ನನ್ನ ಮುಖ್ಯ ವಿಚಾರಣೆಯಲ್ಲಿ **5** ಲಕ್ಷ ರೂಪಾಯಿ ಖರ್ಚಾಗಿದೆ ಎಂದು ಬರೆಸಿದ್ದೇನೆ ಎಂದರೆ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ **5** ಲಕ್ಷಕ್ಕಿಂತ ಹೆಚ್ಚಿನ ಹಣ ಖರ್ಚಾಗಿದೆ ಎಂದು ಬರೆಸಿದ್ದೇನೆ. ಲೆಕ್ಕಚಾರದ ಪಟ್ಟಿಯಲ್ಲಿ ನಾನು ನಮೂದು ಮಾಡಿರುವಷ್ಟು ಹಣವನ್ನು ನನ್ನ ಚಿಕಿತ್ಸೆಗಾಗಿ ಖರ್ಚು ಮಾಡಿರುವುದಿಲ್ಲ ಎಂದರೆ ಸುಳ್ಳು.

9) ವೈದ್ಯರ ಸಲಹಾ ಸೂಚಿ ಚೀಟಿ **(medical Prescriptions)** ಗಳನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸುಳ್ಳು. ಅಪಘಾತಕ್ಕಿಂತ ಮೊದಲು ನಾನು ಕಲ್ಯಾಣಿ ಮೋಟರ್ ನಲ್ಲಿ ನಾನು ಚಾಲಕನಾಗಿ ಕೆಲಸ ಮಾಡುತ್ತಿದ್ದೆನು ಮತ್ತು ನನಗೆ ಒಂದು ತಿಂಗಳಿಗೆ **30** ಸಾವಿರ ರೂಪಾಯಿ ಸಂಬಳ ಬರುತ್ತಿತ್ತು ಎನ್ನುವ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

ನಾನು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಮತ್ತು ನನಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸುಳ್ಳು. ನಾನು ಹಾಜರುಪಡಿಸಿರುವಂತಹ ಮೆಡಿಕಲ್ ಬಿಲ್ಲುಗಳನ್ನು ಸಹಾ ನಾನು ಸೃಷ್ಟಿ ಮಾಡಿದ್ದೇನೆ ಎಂದರೆ ಸುಳ್ಳು.

10) ನನ್ನ ಸಾಕ್ಷಿ ಪ್ರಮಾಣ ಪತ್ರದ ಖಂಡಿಕೆ **2** ರಿಂದ ಖಂಡಿಕೆ **8** ರ ವರೆಗೆ ಇರುವ ಸಂಗತಿಗಳನ್ನು ನಾನು ಕಲ್ಪನೆ ಮಾಡಿಕೊಂಡು ಬರೆಸಿದ್ದೇನೆ ಮತ್ತು ಆ ಸಂಗತಿಗಳು ಸುಳ್ಳು ಸಂಗತಿಗಳು ಆಗಿವೆ ಎಂದರೆ ಸುಳ್ಳು. ನಾನು ಹೇಳಿದ ಹಾಗೆ ನನಗೆ ಯಾವುದೇ ತೊಂದರೆ ಅಥವಾ ಅಂಗ ನ್ಯೂನತೆ ಆಗಿರುವುದಿಲ್ಲ ಮತ್ತು ನಾನು ಕೇವಲ ಪರಿಹಾರವನ್ನು ಪಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

11) ಅಪಘಾತದ ಸಮಯದಲ್ಲಿ ನನಗೆ ಸುಮಾರು **30** ವರ್ಷ ವಯಸ್ಸು ಆಗಿತ್ತು ಎಂದರೆ **26** ವರ್ಷ ಆಗಿತ್ತು.

12) ನಿ.ಪಿ.**4** ಎಂದು ಗುರುತು ಆಗಿರುವ ನಕ್ಷೆಯಲ್ಲಿ ವಾಹನದ ಸಂಖ್ಯೆ ಆಗಲೀ ಅಥವಾ ವಾಹನದ ಚಿತ್ರವಾಗಲೀ ಕಂಡು ಬರುವುದಿಲ್ಲ ಎಂದರೆ ಸರಿ.

**ಪಾಟೀ ಸವಾಲು: 1 ನೇ ಎದುರುದಾರರ ಪರವಾಗಿಃ**

1 ನೇ ಎದುರುದಾರರು ಏಕ ಪಕ್ಷೀಯವಾಗಿದ್ದಾರೆ. ಆದ ಕಾರಣದಿಂದ ಪಾಟೀ

ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ: ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.